ಸಮುದ್ರ ಮಥನ




**ಚಿಂತನಾರ್ಹ**

‘ಕಡಲ ನೀರನು ಕುಡಿಯಬಹುದೆ?’, ಸಂತೋಷ ರಾವ್ ಪೆರ್ಮುಡ ಅವರ ಮುಖಪುಟ ಲೇಖನ (ಸುಧಾ, 1 ಮಾರ್ಚ್) ಚಿಂತನಾರ್ಹ. ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಸರ್ಕಾರ ಆಯವ್ಯಯದ ಬಗ್ಗೆ ಚಿಂತಿಸುವುದು ಸಲ್ಲದು. ಎಲ್ಲಾ ಕಾಲ ಗಳಲ್ಲಿಯೂ ಜೀವ ಜಲವಾದ ನೀರು ಲಭ್ಯವಾಗು ವಂತೆ ನೋಡಿಕೊಳ್ಳುವುದು ಮೊದಲ ಕರ್ತವ್ಯ.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ, ಎ.ಪಿ. ರಂಗನಾಥ್ ಮೈಸೂರು, ಎಚ್.ಆನಂದಕುಮಾರ್ ಚಿತ್ರದುರ್ಗ, ಕೊಹಿಮ ಬಸರಕೋಡು, ಮಹಾವೀರ ಕಾಸರ ಶಿವಮೊಗ್ಗ, ತೋರಗಲ್ಲ ಸುಶೀಲಾ ರಾಮದುರ್ಗ

**ಸ್ವಾಗತಾರ್ಹ**

ಜಗತ್ತಿನಲ್ಲೇ ನೀರಿನ ಸಮಸ್ಯೆ ಉಂಟಾಗಿರುವಾಗ ಕಡಲ ನೀರನ್ನು ಶುದ್ಧೀಕರಿಸಿ ಬಳಸುವ ವಿಧಾನವನ್ನು ಇಸ್ರೇಲಿನವರು ನಮ್ಮ ಪ್ರಧಾನಿಯವರಿಗೆ ತೋರಿಸಿದ್ದಾರೆ. ದೈನಂದಿನ ಉಪಯೋಗಗಳಿಗೆ ಬಳಸುವ ರೀತಿಯನ್ನು ಇಸ್ರೇಲ್‌ನ ಉದಾಹರಣೆಯೊಂದಿಗೆ ತಿಳಿಯಪಡಿಸಿದ್ದು ಸ್ವಾಗತಾರ್ಹ.

—ಗಾಣಧಾಳು ರಾಮಣ್ಣ, ಚಿತ್ರದುರ್ಗ

**ಎಚ್ಚರಿಕೆಯ ಘಂಟೆ**

‘ಜೀವಜಲಕ್ಕೆ ಕುತ್ತು ಕಾದಿದೆ ಆಪತ್ತು’ (ಡಾ. ಎಂ. ಶಾಲಿನಿ) ಲೇಖನ ಬೆಂಗಳೂರಿನ ಜನರಿಗೆ ಎಚ್ಚರಿಕೆಯ ಘಂಟೆಯಾಗಿದೆ. ಬೆಂಗಳೂರಿನ ಕೆಲವು ಗಲ್ಲಿಗಳಲ್ಲಿ ಪೈಪು ಒಡೆದು ನೀರು ಹರಿದು ಹೋಗುತ್ತಿರುವುದು ನೋಡಿದರೆ ಬೆಂಗಳೂರಿಗರು ಕೆಲವು ವರ್ಷಗಳಲ್ಲಿ ಗುಳೇ ಹೋಗಬೇಕಾದೀತು.

—ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ, ಮಹಾಲಿಂಗ ಮು. ಗೋರಬಾಳ, ಮಧುರ ಸುಬ್ರಹ್ಮಣ್ಯ ಬೆಂಗಳೂರು

**ಪತ್ರ ಸಂಸ್ಕೃತಿ**

‘ವಿಚಾರ ಲಹರಿ’ಯಲ್ಲಿ ‘ಮತ್ತೆ ಪತ್ರ ಬರೆಯುವ..’ (ಶಿಕಾಕು) ಬರಹ ನಮ್ಮಲ್ಲಿ ಪತ್ರ ಸಂಸ್ಕೃತಿ ಇನ್ನು ಜೀವಂತ ಇದೆ ಎಂಬುದನ್ನು ಎತ್ತಿತೋರಿಸಿದೆ. ಇಂದು ಇ–ಮೇಲ್, ಎಸ್.ಎಂ.ಎಸ್.ಗಳ ಭರಾಟೆಯಲ್ಲಿ ಪತ್ರ ಬರೆಯುವುದು ಬಹಳ ಅಪರೂಪವಾಗಿ ಬಿಟ್ಟಿದೆ. ಫೋನಿನಲ್ಲಿ ತಾಸುಗಟ್ಟಲೆ ಹರಟುವವರಿಗೆ ಒಂದೆರಡು ಸಾಲು ‘ಕುಶಲೋಪರಿ’ ವಿಚಾರಿಸುವ ಪತ್ರ ಬರಹದ ಮಹತ್ವ ಏನು ಗೊತ್ತು? ಆದರೂ ಒಂದು ಸಮಾಧಾನ ವಿಷಯ ಅಂದರೆ ಈಗಲೂ ಕೆಲವರಾದರೂ ಪತ್ರಗಳನ್ನು ಬರೆಯುತ್ತಿದ್ದಾರಲ್ಲ!

—ಬಿ.ಎಸ್. ರಮೇಶ್ ಬೆಂಗಳೂರು, ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಎಸ್.ಲಕ್ಷ್ಮೀನರಸಿಂಹ ಚಾಮರಾಜನಗರ, ಮುಕುಂದ ಹೆರಕಲ್ಲ ಕಲಬುರಗಿ, ನಾರಾಯಣಯಾಜಿ ಶಿರಾಲಿ, ರಾಜಶೇಖರ ಹಾದಿಮನಿ ಧಾರವಾಡ, ಸಹನಾ ಹುಣಸೂರು, ವಿದ್ಯಾ ಹೆಗಡೆ ಬೆಂಗಳೂರು, ಅಮೃತೇಶ್ವರ ತಂಡರ ಅಣ್ಣಿಗೇರಿ

**ಪತ್ರ ಸಂಸ್ಕೃತಿ ಕೂಟ**

ನಮ್ಮದೊಂದು ಪತ್ರ ಸಂಸ್ಕೃತಿ ಮಿತ್ರರ ಕೂಟ ಅಸ್ತಿತ್ವದಲ್ಲಿದೆ. ಇದನ್ನು ಹೊಸಳ್ಳಿ ದಾಳೆಗೌಡರು ಹುಟ್ಟುಹಾಕಿದ್ದು. ಈಗಲೂ ಸಕ್ರಿಯವಾಗಿದೆ. ಅನೇಕ ಪತ್ರಮಿತ್ರರು ಕಾರ್ಡಿನಲ್ಲಿ ಪರಸ್ಪರ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಿರುತ್ತೇವೆ. 50 ವರ್ಷಗಳ ಹಿಂದೆ ಹೊಸದಾಗಿ ಮದುವೆಯಾಗಿ ತವರಿನಲ್ಲಿದ್ದ ನನ್ನಾಕೆಗೆ ನಾನು ಪತ್ರ ಬರೆದದ್ದು, ಅವಳ ಪತ್ರಕ್ಕಾಗಿ ದಿನವೂ ಅಂಚೆಯಣ್ಣನ ದಾರಿ ಕಾದದ್ದು, ಸಿಕ್ಕ ಕೂಡಲೇ ಪುನಃ ಪುನಃ ಅದನ್ನು ಓದಿ ಅಕ್ಷರಗಳಲ್ಲಿ ನನ್ನವಳನ್ನು ಕಾಣುವುದು ನೆನಪು ಮಾಡಿಕೊಂಡರೆ ಪುಳಕವಾಗುತ್ತದೆ.

—ಕೇಶವಪ್ರಭು ಶಿವಮೊಗ್ಗ

**ಪರೀಕ್ಷೆಯಲ್ಲಿ ಪತ್ರ ಲೇಖನ**

ಪತ್ರ ಬರೆಯುವ ಕಲೆಯಲ್ಲಿರುವ ಆನಂದ ಪತ್ರ ಬರೆದು ಅನುಭವ ಇರುವವರಿಗೆ ಮಾತ್ರ ಗೊತ್ತು. ಶಿಕ್ಷಕಿಯಾದ ನಾನು ಮಕ್ಕಳಿಗೆ ಪರೀಕ್ಷೆಯ ನೆಪದಲ್ಲಿ ಪತ್ರ ಬರೆಯುವ ಅವಕಾಶವನ್ನು ಎಂದೂ ತಪ್ಪದಂತೆ ನೋಡಿಕೊಳ್ಳುವೆ.

— ಪುಷ್ಪಾ ಶ್ರೀರಾಮ್ ಬೆಂಗಳೂರು

**ಗಟ್ಟಿವಾದ**

‘ನಿಮ್ಮೊಡನೆ’ಯಲ್ಲಿ ‘ಅರಣ್ಯ ವೃದ್ಧಿ: ವರದಿ ವಸ್ತುನಿಷ್ಠವೇ?’ (ಸುಧಾ ಹೆಗಡೆ) ಬರಹ ಅಂಕಿ ಅಂಶಗಳೊಂದಿಗೆ ಗಟ್ಟಿ ವಾದ ಮಂಡಿಸಿದೆ.

—ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

**ಉಪಯುಕ್ತ ಮಾಹಿತಿ**

‘ಬೆಲ್ಲ ಕಲಬೆರಕೆ ಸಲ್ಲ’ (ಅರುಣ್ ಇಸ್ಲೂರ್) ಲೇಖನ ಅನೇಕ ಉಪಯುಕ್ತ ಮಾಹಿತಿಗಳನ್ನು ಒಳಗೊಂಡಿದೆ. —ಸುಂದರ್, ಬೆಂಗಳೂರು

**ಸವಿ ನೆನಪು**

ಸವಿ ಸವಿ ನೆನಪು ಅಂಕಣದಲ್ಲಿ ರವಿರಾಜ ಹಾಲಾಡಿ ಅವರು ನೆನಪಿಸಿಕೊಂಡ ಬಾಲಕೃಷ್ಣ ಪೈ ಯಾನೆ ಕುಳ್ಳಪ್ಪ ಅವರ ನಾಟಕ ಅಭಿನಯದ ಸವಿ ಚೆನ್ನಾಗಿತ್ತು.

—ಪಿ. ಜಯವಂತ ಪೈ ಕುಂದಾಪುರ

**ಎಷ್ಟು ಹೊಗಳಿದರೂ ಸಾಲದು**

ಮಾರ್ಚ್ 1ರ ‘ಸುಧಾ’ ಸಂಚಿಕೆಯನ್ನು ಎಷ್ಟು ಹೊಗಳಿದರೂ ಸಾಲದು. ಪ್ರತಿ ಪುಟವೂ ಸೊಗಸಾಗಿ, ಸ್ವಾರಸ್ಯ ವಿಷಯಗಳಿಂದ ಕೂಡಿ ವಾಚಕರನ್ನು ಸಂತೋಷಪಡಿಸಿದೆ.

—ಎ.ಕೆ. ಅನಂತಮೂರ್ತಿ, ಬೆಂಗಳೂರು

**ನೆಚ್ಚಿನ ಪುಟ**

‘ನೀವು ಕೇಳಿದಿರಿ ?’ ಅಂದಿಗೂ ಇಂದಿಗೂ ನನ್ನ ನೆಚ್ಚಿನ ಪುಟ.

— ಕೆ.ವಿ.ರಾಜಲಕ್ಷ್ಮಿ , ಬೆಂಗಳೂರು

**ಪದಬಂಧ ತಪ್ಪಿದೆ**

ಫೆ.22ರ ಸಂಚಿಕೆಯ ಪದಬಂಧದ ಉತ್ತರ ಮಾ.1 ಸಂಚಿಕೆಯಲ್ಲಿ ಪ್ರಕಟವಾಗಿದ್ದು ಪದಬಂಧ ಗೊಂದಲಕ್ಕೆ ಈಡುಮಾಡಿತು. 16 ಮೇಲಿನಿಂದ ಕೆಳಕ್ಕೆ ಹಾಗೂ 18 ಎಡದಿಂದ ಬಲಕ್ಕೆ ಉತ್ತರಗಳು ತಪ್ಪಾಗಿವೆ.

— ಎ. ಜಾನಕಿರಾಮ್, ಬೆಂಗಳೂರು, ಸುನಂದಾ ಹಾಲಭಾವಿ ಬೆಳಗಾವಿ

